


**15** ಜನರು ಚೀಲದಲ್ಲಿ ಮಣ್ಣನ್ನು ತುಂಬಿಕೊಂಡು ನದಿಯ ದಂಡೆಯ ಮೇಲೆ ಒಟ್ಟುಗೂಡತೊಡಗಿದರು. ಆ ನಗರದಲ್ಲಿ ರೊಟ್ಟಿಯನ್ನು ಮಾರಿ ಜೀವಿಸುತ್ತಿದ್ದ ಒಬ್ಬ ಮುದುಕಿಯಿದ್ದಳು. ಆಕೆಯ ಹೆಸರು ವಂದಿ. ಆಕೆಯು ತನ್ನ ಪಾಲಿನ ಮಣ್ಣನ್ನು ಹೊತ್ತು ಸಾಗಿಸಲು ಒಬ್ಬ ವ್ಯಕ್ತಿಯನ್ನು ಹುಡುಕುತ್ತಿದ್ದಳು. ಆಗ ಸ್ವಯಂ ಶಿವನೇ ಒಬ್ಬ ಕೂಲಿಯ ವೇಷದಲ್ಲಿ ಕಾಣಿಸಿಕೊಂಡನು.




**16** ಎಲ್ಲರೂ ಶ್ರಮಪಟ್ಟು ದುಡಿಯುತ್ತಿದ್ದರು. ಕೇವಲ ಅಜ್ಜಿಯ ಸಹಾಯಕ ಮಾತ್ರ ನದಿಯ ದಂಡೆಯ ಮೇಲೆ ಆರಾಮವಾಗಿ ಕುಳಿತು, ಇತರರ ಕೆಲಸವನ್ನು ನೋಡಿ, ಆನಂದಿಸುತ್ತಿದ್ದನು. ರಾಜನು ಇದನ್ನು ನೋಡಿದನು.




**17** ರಾಜನು ಚಾವಟಿಯಿಂದ ಅವನ ಬೆನ್ನ ಮೇಲೆ ಹೊಡೆದನು. ಅಲ್ಲಿದ್ದ ಪ್ರತಿಯೊಬ್ಬರ ಬೆನ್ನ ಮೇಲೆಯೂ ಚಾವಟಿಯಿಂದ ಹೊಡೆದ ಗಾಯವಾಯಿತು. ಸ್ವತಃ ರಾಜನೂ ನೋವಿನಿಂದ ನರಳಿದನು. ತಕ್ಷಣವೇ ಅವನಿಗೆ ತನ್ನ ತಪ್ಪಿನ ಅರಿವಾಯಿತು. ಅವನು ಸೆರೆಮನೆಯಲ್ಲಿದ್ದ ತಿರುವದವುರರ್‌ನ ಬಳಿಗೆ ಓಡಿ ಹೋದನು.




**18**

ಭಗವಾನ್ ಶಿವನ ಕೃಪೆಯಿಂದ ನದಿಯ ಪ್ರವಾಹವು ಕಡಮೆಯಾಯಿತು. ಮಾಣಿಕವಾಚಕರ್ ರಾಜನನ್ನು ಬೀಳ್ಕೊಂಡು ಸಂನ್ಯಾಸಿಯಾದರು. ಅವರು ಶಿವದೇವಾಲಯಗಳನ್ನು ದರ್ಶಿಸುತ್ತ ಕೊನೆಗೆ ಚಿದಂಬರಂ ಕ್ಷೇತ್ರವನ್ನು ತಲುಪಿದರು. ಅಲ್ಲಿ ಅವರು ಶಿವನಲ್ಲಿ ಐಕ್ಯರಾದರು. ಮಾಣಿಕವಾಚಕರ್ 'ತಿರುವಾಚಕಮ್' ಎನ್ನುವ ತಮಿಳು ಸ್ತುತಿಗೀತೆಗಳನ್ನು ರಚಿಸಿದರು. ಅವರ ರಚನೆಗಳು ಶಿವಭಕ್ತರಿಗೆ ಅತ್ಯಮೂಲ್ಯವಾಗಿವೆ. ಅವು ಭಕ್ತಿರಸದಿಂದ ತುಂಬಿತುಳುಕಾಡುತ್ತಿವೆ.




(ಮೂಲ: *Pictorial Stories for Children* ; Pub: Sri Ramakrishna Math, Mylapore, Chennai)